# ದಯೆ



ಎಳಕ್ಕೆ ಉಪಾಹಾರ, ಹನ್ನೆರಡಕ್ಕೆ ಊಟ, ಸಂಜೆಗೆ ಚಹಾ ಜೊತೆಗೆ ಕುರುಕಲು. ರಾತ್ರಿ ಎಂಟಕ್ಕೆ ಅಂತಿಮ ಪ್ರಹಾರ. ಮುಗಿದ ಮೇಲೆ ಹಣ್ಣುಗಿಣ್ಣು. ನಡುನಡುವೆ ವಿಶೇಷ ಆಹ್ವಾನವಿದ್ದಾಗ ಐತಿಹಾಸಿಕ ಭೋಜನ, ಐಸ್‌ಕ್ರೀಮ್ ಇತ್ಯಾದಿ. ನನಗೆ ಊಟ ಬೇಕೋ ಊಟಕ್ಕೆ ನಾನು ಬೇಕೋ? ಸಂಶಯ. ಊಟವೇ ಕಾಲಕಾಲಕ್ಕೆ ಕರೆದು ನನ್ನನ್ನು ಚಪ್ಪರಿಸಿ ತಿಂದು ಅಟ್ಟಹಾಸಗೈದಂತೆ. ಆಹಾರ ಬೇಕು ಎಂದು ಅನಿಸಿದ್ದೇ ನೆನಪಿಲ್ಲ. ಹಸಿವಾಗುವವರೆಗೆ ಕಾದು ಹುಡುಕಿ ತಿಂದದ್ದೂ ಇಲ್ಲ. ಅನಿಸುವ ಮೊದಲೇ ಸಿದ್ಧವಾಗಿರುತ್ತದೆ, ತಿಂದೂ ಮುಗಿದಿರುತ್ತದೆ, ಹೊಟ್ಟೆ ತುಂಬಿರುತ್ತದೆ. ಛೆ, ಊಟವೂ ವ್ಯಸನವೇ ನನಗೆ?

ಗಡಿಯಾರದ ತಿರುವುಮುರುವಿಗೆಲ್ಲ ತಿನ್ನುವುದು ಎಂದಿನಿಂದ ಅಭ್ಯಾಸ? ಚಕ್ಕಲಿ ತಿನ್ನುತ್ತ ಯೋಚಿಸಿದೆ, ತಟ್ಟೆ ಖಾಲಿಯಾದರೂ ತೋಚಲಿಲ್ಲ.

ಆ ದಿನ ನನ್ನ ಎರಡು ಆಹಾರದ ಹೊತ್ತುಗಳ ನಡುವೆ ಒಬ್ಬ ಭಿಕ್ಷುಕ ಮನೆ ಬಾಗಿಲಿಗೆ ಬಂದ, ನರಪೇತಲ.

ಎಷ್ಟೋ ಕಾಲ ಸರಿಯಾದ ಊಟವೇ ಸಿಗದಿದ್ದರೆ ನಾನೂ ಅವನಂತೆಯೇ ಇರುತ್ತಿದ್ದೆನೇನೋ. ನನ್ನಂತೆಯೇ ಕಾಲಕಾಲಕ್ಕೆ ತಿನ್ನುತ್ತಿದ್ದರೆ ಈಗ ನಾನು ಯೋಚಿಸುವಂತೆ ಅವನೂ ಯೋಚಿಸುತ್ತಿದ್ದನೇನೋ.

'ಹಸಿವಾಗಿದೆ, ಏನೋ ಕೊಡಿ' ಅಂದ.

ನಾನೂ ಒಳಗೆ ಹೋಗಿ ಹುಡುಕಿದೆ, ಪ್ರಾಮಾಣಿಕವಾಗಿ.

ನಂಬಿದರೆ ನಂಬಿ ಬಿಟ್ಟರೆ ಬಿಡಿ, ಬೆಳಗಿನ ತಿಂಡಿ ಖಾಲಿ ಆಗಿತ್ತು, ಮಧ್ಯಾಹ್ನದ ಊಟ ಸಿದ್ಧವಾಗಿರಲಿಲ್ಲ.

ಮುಂದಿನ ಮನೆಗೆ ಹೋದ.

ಅಯ್ಯೋ ಎನಿಸಿತು.

ಮರುದಿನ, ಮತ್ತೆ ಬರಬಹುದು ಎಂದು ಹೆಚ್ಚಿಗೆ ಅಡುಗೆ ತಯಾರಾಗಿತ್ತು.

ಬರಲೇ ಇಲ್ಲ.

ಇನ್ಯಾವುದೋ ಬೀದಿಯಲ್ಲಿ ಆಹಾರ ಹುಡುಕಿ ಅಲೆಯುತ್ತಿದ್ದಿರಬೇಕು, ಎಷ್ಟು ಸೊಕ್ಕು?

ನಾನೇ ತಿಂದು ಮುಗಿಸಿದೆ.

ತುಂಬ ವರ್ಷಗಳ ನಂತರ ಮತ್ತೆ ಬಂದ, ಪ್ಲೇಟು ತುಂಬಾ ತಿಂಡಿ. ಇನ್ನೇನು ತುತ್ತು ಬಾಯಲ್ಲಿ ಇಡುತ್ತೇನೆ ಎನ್ನುವಾಗ.

ಜೊತೆಗೊಬ್ಬ ಸಣ್ಣ ಹುಡುಗನೂ, ಹಿರಿಯನಂತೆ ಕಿರಿಯನೂ ಬಡಕಲು. ಇಬ್ಬರ ಕೈಯಲ್ಲೂ ಖಾಲಿ ಪಾತ್ರೆ.

ಊಟ ತಂದುಕೊಡಲು ಒಳಗೆ ಹೋದೆ. ಎರಡೂ ಪಾತ್ರೆ ತುಂಬುವಷ್ಟು ತಂದೆ, ಬೆನ್ನು ಕಾಣಿಸಿತು. ಆಗಲೇ ತಿರುಗಿ ನಡೆಯುತ್ತಿದ್ದರು.

'ಉಳಿದಿರಲಿಕ್ಕಿಲ್ಲ, ಹೋಗಲಿ ಬಿಡು' ಎನ್ನುತ್ತ ನೆರೆಮನೆಯ ಗೇಟಿನ ಕುಣಿಕೆ ಜಾರಿಸಿದ್ದರು.

●